**PW_4**

**<u>1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಚಿತ್ರದುರ್ಗ</u>**

**<u>ಸಿ.ಸಿ.2350/2021</u>**

| | | |
|---|---|---|
| ಸಾಕ್ಷಿದಾರರ ಹೆಸರು | ಮಲ್ಲಿಕಾರ್ಜುನ | PW:4 |
| ತಂದೆಯ ಹೆಸರು | ಚಂದ್ರಶೇಖರಪ್ಪ | CW:12 |
| ವಯಸ್ಸು | 54 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | ಖಾಸಗಿ ಕೆಲಸ | ದಿನಾಂಕ : 09/08/2024 |
| ವಾಸ | ಸಾದರಹಳ್ಳಿ, ಚಿತ್ರದುರ್ಗ | |

**<u>ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ</u>**

ದಿಃ 01.03.2012 ರಂದು ನಾನು 6 ನೇ ಆರೋಪಿ ಮನೆಯಲ್ಲಿ ನನ್ನ ಹಾಗೂ ಚಾಸಾ.13 ರವರ ಸಮಕ್ಷಮದಲ್ಲಿ ಚಾಸಾ.35 ರವರು 6 ನೇ ಆರೋಪಿ ಮನೆಯ 1 ನೇ ಮಹಡಿಗೆ ಕರೆದುಕೊಂಡು ಹೋಗಿ ಮನೆಯ ಒಳಗಡೆ ಎರಡು ರೂಮ್ ಗಳು ಇದ್ದು ಒಂದು ರೂಂ ನಲ್ಲಿ 4 ಗಾಡ್ರೆಜ್ ಬೀರುಗಳು ಇರುತ್ತವೆ. ಹಾಗೂ ಮನೆಯಲ್ಲಿರುವ ಕೊಠಡಿಯ ಬೀರುಗಳು ಇರುತ್ತವೆ. ಅವುಗಳನ್ನು ನಮ್ಮ ಸಮಕ್ಷಮದಲ್ಲಿ ಶೋದನೆ ಮಾಡಿ ನೋಡಲಾಗಿ ಯಾವುದೇ ನಗದು ಹಣ ಮತ್ತು ಬೆಲೆ ಬಾಳುವ ಒಡವೆಗಳು ದಾಖಲಾತಿಗಳು ದೊರೆತಿರುವುದಿಲ್ಲ. ಆ ಸಮಯದಲ್ಲಿ ಆರೋಪಿಯ ಅಣ್ಣ ಸುರೇಶ ಬಾಬು ರವರು ಹಾಜರರಿರುತ್ತಾರೆ ಬೆಳಗ್ಗೆ 11 ರಿಂದ 11.45 ರವರೆಗೆ ಜಪ್ತು ಪಂಚನಾಮೆಯನ್ನು ಮಾಡಿರುತ್ತಾರೆ. ಜಪ್ತು ಪಂಚನಾಮೆ ಕಾಲಕ್ಕೆ ಇದ್ದ ಸದರಿ ಆರೋಪಿಯು ಈಗ ಮೃತರಾಗಿರುತ್ತಾರೆ. ಸಾಕ್ಷಿಯು ಎರಡು ದಾಖಲೆಗಳಲ್ಲಿ ತನ್ನ ಸಹಿಯನ್ನು ಗುರುತಿಸಿದ್ದರಿಂದ ಎರಡು ದಾಖಲೆಗಳು ನಿಪಿ.112 ಮತ್ತು 113 ಎಂದು, ಸಾಕ್ಷಿಯ ಸಹಿಯನ್ನು

**PW_4**

ನಿಪಿ.112(ಎ) ಮತ್ತು 113(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಮರುವಿಚಾರಣೆಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**